**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.990/2019**

**CW-2** **PW:2**

| | | |
|---|---|---|
| ಸಾಕ್ಷಿಯ ಹೆಸರು | ಃ | ರಮೇಶ ಅದರಗುಂಚಿ |
| ತಂದೆ /ಗಂಡನ ಹೆಸರು | ಃ | ಮಲ್ಲಪ್ಪ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಖಾಸಗಿ ನೌಕರ |
| ವಾಸಸ್ಥಳ | ಃ | ಈಶ್ವರ ನಗರ, ಹುಬ್ಬಳ್ಳಿ |

ದಿಃ **11.06.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ತೋರಿದ ದಾಖಲಾತಿಗೆ ಸಹಿ ಮಾಡಿದ್ದು ಅದನ್ನು ನಿಪಿ.6 ಸ್ಥಳ ಮಹಜರು ಎಂದು, ನನ್ನ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ದಿಃ 17.01.2019 ರಂದು ರಾತ್ರಿ 10 ಗಂಟೆ ಮೇಲ್ಪಟ್ಟು ಈ ಸಹಿ ಮಾಡಿದ್ದೇನೆ. ವೈಷ್ಣೋದೇವಿ ಗುಡಿ ಹಿಂಬಾಗ ನಾನು ನಿಪಿ.6 ಕ್ಕೆ ಸಹಿ ಮಾಡಿದ್ದೇನೆ. ಈ ಜಾಗೆಯನ್ನು ತನಿಖೆಗೆ ಬಂದ ಪೊಲೀಸ್ ಅಧಿಕಾರಿ ತೊರಿಸಿದರು. ನನ್ನ ಜೊತೆ ಚಾಸಾಃ 3 ಇದ್ದರು. ಅವರು ಈಗ ತೀರಿಕೊಂಡಿದ್ದಾರೆ. ಬೈಕ್ ಕಳ್ಳತನ ವಿಚಾರವಾಗಿ ಘಟನಾ ಸ್ಥಳದ ಪಂಚನಾಮೆ ಆಗಿದೆ.

**ಪಾಟಿಸವಾಲುಃ 1 ನೇ ಆರೋಪಿ ಪರ ಶ್ರೀಮತಿ ಮಂಗಳಾ ವಕೀಲರಿಂದಃ**

ನಾನು ಬಹಳಷ್ಟು ಪ್ರಕರಣಗಳಲ್ಲಿ ಪಂಚನಾಗಿದ್ದೇನೆ ಎಂದರೆ ಸರಿ. ನಿಪಿ.6 ಕ್ಕೆ ನಾನು ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮಾಡಿದ್ದೇನೆ. ನಿಪಿ.6 ರಲ್ಲಿ ಏನು ಬರದಿದೆ ಎನ್ನುವುದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ನಾನು ಘಟನಾ ಸ್ಥಳಕ್ಕೆ ಹೋಗದೇ ಇದ್ದರೂ ಸಹ ಪೊಲೀಸರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2 ನೇ ಆರೋಪಿ ಪರ ವಕೀಲರು ಗೈರು ಹಾಜರು ಇರುವುದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.